# ಅನಿಕೇತನ ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. Manmohan Singh Bengaluru City University

ಆಗು ನೀ ಅನಿಕೇತನ
BE BOUNDLESS

ಸಂಪುಟ 01 | ಸಂಚಿಕೆ 07 | ಬೆಂಗಳೂರು | May 2026 | ಪುಟ 01

Monthly Campus Newsletter by the Department of Mass Communication and Journalism. (For Private Circulation Only)


# 5th Annual Convocation-New Milestone in Academic Progress

The 5th Annual Convocation of Dr. Manmohan Singh Bengaluru City University was held at Jnanajyothi Auditorium with great enthusiasm. The event celebrated academic excellence and honoured distinguished achievers from various fields.

The Honorable Governor of Karnataka, Thawar Chand Gehlot, presided over the ceremony. He advised students to serve the nation with dedication and honesty.

A total of 73 students received gold medals and cash prizes, including 18 male and 55 female students. Twenty-three students were awarded Ph.D. degrees. A total of 37,393 students were listed to



Hon'ble Governor, Vice Chancellor along with honorary doctorate awardees and other dignitaries.

receive their degrees. Among the graduates, 21,912 (58.63%) were female and 15,481 (41.37%) were male. Honorable Governor also pronounced honorary doctorates to six eminent personalities for their contributions to society. The awardees included B.K.Venkatesh Prasad (Sports),Dr. K. Govindaraj (Sports administration), Dr.M. Mohan Alva (Educationist), T. K. Narayanappa (Educationist), Arjun Janya (Music) and Bava Mohammed Farookh (Entrepreneur).

The Chief Guest, Dr. Binay Kumar Das, Director General (ECS), DRDO, in his very vibrant convocation address said that India has transformed from an "import denial nation" to a self-reliant country. He added that the world is now ready to "buy your knowledge" and encouraged students to contribute to national development through innovation and science.

Vice-Chancellor Pof. Ramesh.B. welcomed the dignitaries and presented the annual report of the university highlighting institutional growth, academic progress, collaborations, and MOUs. He motivated the students by saying, "The future is shaped by what we choose to do today. Do not wait for opportunities—create them and bring honor to yourselves and the institution"

Quoting A. P. J. Abdul Kalam, he said that education is the most powerful weapon to change the world. He reminded the graduates that their degrees represent not only knowledge but also great responsibility, leadership, and the power to shape society.

The Vice-Chancellor emphasised that the university has been preparing the students for a rapidly changing world influenced by technology, ethics, and global systems. He urged them to remain curious, adaptable, and innovative as they move forward in life.

Registrar (Admin.) Naveen Joseph A. announced the list of Gold medalists, Rank holders, and Ph.D. awardees. Prof. Ramesh B. Kudenatti, Registrar (Evaluation) delivered vote of thanks. Syndicate members, Academic council members, Deans and faculties were also present on the occasion.

**-Dr. Srinivasa C N,**
MCJ Dept.

# Rank Holders and Medalists



Divyashree S(L), Abshishek Shrirma(M), Sneha T(R)

Dr.Manmohan Singh-Bengaluru City Univeristy Chemistry Post-graduate student Sneha T. won 4 gold medals, B.Com student Abhishek Shriram from Sheshadripuram Institute of Management College and BBA student Divyashree S. from Krupanidhi College of Commerce, Chikkabellandur received 3 gold medals each.

Chief Minister Siddaramaiah has congratulated Rural talent, a farmer's daughter from Devanahalli Taluk Sneha T. and other top achievers on his social media platform.

## Lt. Col. Wins Gold Medal

Lieutenant Colonel Mayank Goel, a student of Dr.MSBCU has been awarded Gold Medal in MCJ. A dedicated officer in the Indian Army, Lt. Col. Goel stood out for his excellent performance in his studies and academic activities and also media projects.


Lt. Col Mayank Goel

# ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾಧಿವೇಶನ

ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ಮಹಾಧಿವೇಶನ ಏಪ್ರಿಲ್ 24 ರಿಂದ 26 ರವರೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನೆರವೇರಿತು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ ಹಾಗೂ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಸಹಯೋಗದಲ್ಲಿ ಈ ಮಹಾಧಿವೇಶನವನ್ನು ಆಯೋಜಿಸಲಾಗಿತ್ತು.

ವಿಧಾನ ಪರಿಷತ್ತಿನ ಮಾಜಿ ಉಪಸಭಾಪತಿಗಳಾದ ಪುಟ್ಟಣ್ಣನವರು ಸಮಾರಂಭವನ್ನು ಉದ್ಘಾಟಿಸಿದರು.

Dr.MSBCU ಕುಲಪತಿಗಳಾದ ಪ್ರೊ. ಬಿ. ರಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ರಾಮೋಜಿ ಗೌಡ, ಡಿ.ಟಿ. ಶ್ರೀನಿವಾಸ್, ಮಹಾಧಿವೇಶನದ ಸರ್ವಾಧ್ಯಕ್ಷರಾದ ಪ್ರೊ. ಶೇಖ್ ಮಸ್ತಾನ್, ಜೆಎನ್‌ಯು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಜಾನಕಿ ನಾಯರ್, ಕರ್ನಾಟಕ ಇತಿಹಾಸ ಪರಿಷತ್ತಿನ ಪದಾಧಿಕಾರಿಗಳಾದ ಡಾ. ಆರ್. ರಾಜಣ್ಣ, ಡಾ. ಈರಣ್ಣ ಪತ್ತಾರ್, ಪ್ರೊ. ನಾಗರತ್ನಮ್ಮ, ಪ್ರೊ. ಮಂಜುನಾಥ ಟಿ. ಎಮ್, ಪ್ರೊ. ಬಿ.ಸಿ ನಾಗೇಂದ್ರ ಕುಮಾರ್, ಡಾ. ಬಿ,ಆರ್. ಸುಪ್ರೀತ್ ಉಪಸ್ಥಿತರಿದ್ದರು.

ಉದ್ಘಾಟನಾ ಭಾಷಣದಲ್ಲಿ ಪ್ರೊ. ಜಾನಕಿ ನಾಯರ್ ಅವರು ಸ್ಥಳೀಯ ಇತಿಹಾಸದ ಮಹತ್ವವನ್ನು ಒತ್ತಿ ಹೇಳಿದರು, ಇತಿಹಾಸವು ಜನಕೇಂದ್ರಿತವಾಗಿರಬೇಕು ಎಂದು ಆವರು ಅಭಿಪ್ರಾಯಪಟ್ಟರು.

ಪ್ರೊ. ಬಿ. ರಮೇಶ್ ರವರು ಮಾತನಾಡಿ ಭಾರತದ ನಿರ್ಮಾಣದಲ್ಲಿ ಇತಿಹಾಸದ ಪಾತ್ರ ಹಾಗೂ ವರ್ತಮಾನದ ಸಮಸ್ಯೆಗಳಿಗೆ ಸ್ಪಂದಿಸುವ ಅಗತ್ಯವನ್ನು ವಿವರಿಸಿದರು.

ಮಹಾಧಿವೇಶನದ ಸರ್ವಾಧ್ಯಕ್ಷರಾದ ಪ್ರೊ. ಶೇಖ್ ಮಸ್ತಾನ್ ಅವರು ಇತಿಹಾಸ ಅಧ್ಯಯನ ಮತ್ತು ಬೋಧನೆಯಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯ ಬಳಕೆಯ ಅಗತ್ಯವನ್ನು ಪ್ರತಿಪಾದಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು "ಉನ್ನತ


ವಿಧಾನಪರಿಷತ್ತಿನ ಮಾಜಿ ಉಪಸಭಾಪತಿ ಪುಟ್ಟಣ್ಣನವರು ಕಾರ್ಯಕ್ರಮ ಉದ್ಘಾಟಿಸಿದರು

ಶಿಕ್ಷಣದ ಸವಾಲುಗಳು ಮತ್ತು ಸಾಧ್ಯತೆಗಳು" ವಿಷಯದ ಕುರಿತು ಉಪನ್ಯಾಸ ನೀಡಿದರು. ಇತಿಹಾಸಕಾರರಾದ ಪ್ರೊ. ಎಸ್. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು.

ಮಹಾಧಿವೇಶನದಲ್ಲಿ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಹಾಗೂ ಸಮಕಾಲೀನ ಇತಿಹಾಸದ ವಿವಿಧ ಆಯಾಮಗಳನ್ನು ಒಳಗೊಂಡ ಪ್ರಬಂಧಗಳು ಮಂಡಿಸಲ್ಪಟ್ಟವು ಸ್ಥಳೀಯ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯ ಅಧ್ಯಯನಕ್ಕೆ ಇವು ಹೊಸ ದಿಕ್ಕು ನೀಡಿದವು. ಎರಡನೇ ದಿನ ನಡೆದ ದತ್ತಿ ಉಪನ್ಯಾಸಗಳಲ್ಲಿ ಪದ್ಮಶ್ರೀ ಪುರಸ್ಕೃತ ಡಾ. ಶಾರದಾ ಶ್ರೀನಿವಾಸನ್ ಅವರು "Metallurgical Insights into South Indian Iron Age", ಪ್ರೊ. ಅನುರಾಧ.ವಿ. ಅವರು Decoding the Mysteries and Exploring the Existential realitie ಹಾಗೂ ಪ್ರೊ. ಎಂ. ಜಮುನಾ ಅವರು Governing Social Hygiene and Moral Order in a colonial Space:Bengaluru ಕುರಿತು ಉಪನ್ಯಾಸ ನೀಡಿದರು.

ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ನಾಗೇಂದ್ರ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕರಾದ ಡಾ. ಲಕ್ಷ್ಮಣ ತೆಲಗಾವಿ ಮುಖ್ಯ ಭಾಷಣ ಮಾಡಿದರು.

**–ಡಾ. ವಿ. ಕಾಂತರಾಜು.**

# ಬಸವ ಅಧ್ಯಯನ ಪೀಠ ಸ್ಥಾಪನೆ ಪ್ರಸ್ತಾಪ

ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ನಾಡಿನ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ವಿಚಾರಧಾರೆಯ ಬಗ್ಗೆ ಯುವ ಪೀಳಿಗೆಯಲ್ಲಿ ಹೆಚ್ಚಿನ ಅರಿವು ಮೂಡಿಸಲು "ಬಸವ ತತ್ವ ಅಧ್ಯಯನ ಪೀಠ" ಸ್ಥಾಪಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದೆ ಎಂದು ಕುಲಪತಿಗಳಾದ ಪ್ರೊ. ರಮೇಶ್.ಬಿ. ಪ್ರಕಟಿಸಿದ್ದಾರೆ.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ರಾಜಾಜಿ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಮಸಮಾಜ ನಿರ್ಮಾಣದ ಗುರಿ ಸಾಧನೆಯ ನಿಟ್ಟಿನಲ್ಲಿ 12ನೇ ಶತಮಾನದ ಮಹಾನ್ ಸಮಾಜ ಸುಧಾರಕ ಕಾಯಕಯೋಗಿ ಬಸವಣ್ಣನವರ ಕೊಡುಗೆ ಅನನ್ಯ ಎಂದು ಬಣ್ಣಿಸಿದರು.

ಜಾತಿ ಪದ್ಧತಿ, ಕಂದಾಚಾರ ಮತ್ತು ಮೌಢ್ಯತೆಯ ಕೂಪದಲ್ಲಿ ಸಿಲುಕಿದ್ದ ಅಂದಿನ ವ್ಯವಸ್ಥೆಯಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಲಿಂಗ ಸಮಾನತೆಯ ಆಶಯಗಳನ್ನು ದಿಟ್ಟತನದಿಂದ ಎತ್ತಿಹಿಡಿಯುವ ಮೂಲಕ ಬಸವಣ್ಣನವರು ಕ್ರಾಂತಿಕಾರಿ ಪರಿಣಾಮ ಬೀರಿದರೆಂದು ಅವರು ವಿಶ್ಲೇಷಿಸಿದರು.

ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ಪರಿಕಲ್ಪನೆಯನ್ನು ಜಗತ್ತಿಗೆ ಸಾರಿದ ಬಸವೇಶ್ವರರು 'ಕಾಯಕವೇ ಕೈಲಾಸ' ಎಂಬ ಧ್ಯೇಯದ ಮೂಲಕ ಶ್ರಮಸಂಸ್ಕೃತಿ ಸಂದೇಶ ಪ್ರತಿಪಾದಿಸಿದರೆಂದು ಅವರು ವಿಶ್ಲೇಷಿಸಿದರು.


ಸೆಂಟ್ರಲ್ ಕಾಲೇಜಿನ ರಾಜಾಜಿ ಸಭಾಂಗಣದಲ್ಲಿ ಬಸವ ಜಯಂತಿ ಆಚರಣೆ

“ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ” ಎಂಬ ಬಸವಣ್ಣನವರ ವಿಚಾರಧಾರೆ ಚಲನಶೀಲತೆ ತತ್ವಾಧಾರಿತ ಸಾರ್ವಕಾಲಿಕ ವೈಜ್ಞಾನಿಕ ಸತ್ಯವೆಂದು ವ್ಯಾಖ್ಯಾನಿಸಿದರು. ಶರಣ ಚಳವಳಿಯ ಉದಾತ್ತ ಆದರ್ಶಗಳು ಇಂದಿಗೂ ಅತ್ಯಂತ ಪ್ರಸ್ತುತ ಎಂದು ಅವರು ಅಭಿಪ್ರಾಯಪಟ್ಟರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಿಂಡಿಕೇಟ್ ಸದಸ್ಯರಾದ ಕೆ.ಪಿ.ಪಾಟೀಲ್‌ರವರು ಅಂತರ್ಜಾತೀಯ ವಿವಾಹದ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯದ ಕಹಳೆಯನ್ನು ಮೊಳಗಿಸಿದ ಬಸವಣ್ಣನವರು ಸಾಮಾಜಿಕ ಸಮಾನತೆಯ ಹರಿಕಾರರೆಂದು ಕೊಂಡಾಡಿದರು.

ಕುಲಸಚಿವರು (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ಪ್ರೊ. ಪಿ.ಆರ್.ಚೇತನಾ, ಸಿಂಡಿಕೇಟ್ ಸದಸ್ಯರಾದ ಡಾ.ಎಚ್.ಕೃಷ್ಣರಾಮ್, ವಿ. ಶಿವಕುಮಾರ್, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಅಬ್ದುಲ್ ಖಾದರ್ ಮತ್ತು ಡಾ. ಟಿ.ಪಿ.ಧರ್ಮೇಂದ್ರ ಕುಮಾರ್ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ.ಗೋಪಿ ಕಾರ್ಯಕ್ರಮ ನಿರೂಪಿಸಿದರು. ಡಾ.ಮಂಜು ಮತ್ತು ಡಾ. ಪ್ರಭು ವಚನ ಗಾಯನ ಪ್ರಸ್ತುತಪಡಿಸಿದರು. ಡಾ.ತೇಜೇಶ್ವರ್ ಸ್ವಾಗತಿಸಿ ಡಾ ಅಖ್ತರ್ ವಂದಿಸಿದರು.

# ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ

ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ಸೆಂಟ್ರಲ್ ಕಾಲೇಜ್ ಗಡಿಯಾರ ಗೋಪುರದ ಅವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜಯಂತಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರಾದ ಕೆ. ವಿದ್ಯಾಕುಮಾರಿಯವರು ಜಾತಿ ವಿನಾಶದ ಗುರಿ ಸಾಧನೆಗಾಗಿ ಶ್ರಮಿಸಿದ ಅಂಬೇಡ್ಕರ್ ದಮನಿತ ಜನರ ದನಿಯಾಗಿ ಸಂವಿಧಾನದ ಹಕ್ಕುಗಳ ಮೂಲಕ ಸಮಾನ ಅವಕಾಶ ಒದಗಿಸಿ ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ಎತ್ತಿಹಿಡಿದರೆಂದು ವಿಶ್ಲೇಷಿಸಿದರು.

ಕಾರ್ಮಿಕರಿಗೆ ದಿನಕ್ಕೆ ಎಂಟು ಗಂಟೆಯ ಕೆಲಸ ಮತ್ತು ಉತ್ತಮ ಜೀವನ ಗುಣಮಟ್ಟ ಖಾತರಿಪಡಿಸುವ ಶಾಸನಗಳನ್ನು ರಚಿಸಿದ ಅಂಬೇಡ್ಕರ್‌ರವರ ಕಾಣಿಕೆಯನ್ನು ಶ್ರಮಜೀವಿ ವರ್ಗ ಮರೆಯುವಂತಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ಮಹಿಳೆಯರಿಗೂ ಸಮಾನತೆ ಹಾಗೂ ಆಸ್ತಿ ಹಕ್ಕು ದೊರಕಿಸಲು ಹಿಂದೂ ಕೋಡ್ ಬಿಲ್ ಮಂಡಿಸಿ ಸಂಸತ್ತಿನಲ್ಲಿ ಅಗತ್ಯ ಬೆಂಬಲ ಲಭಿಸದಿದ್ದಾಗ ಮಂತ್ರಿ ಪದವಿಯನ್ನೇ ತ್ಯಜಿಸಿದರೆಂದು ಅವರು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ.ರಮೇಶ್.ಬಿ.ರವರು ಮಾತನಾಡಿ ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಸದಾ ಸದೃಢವಾಗಿರುವಂತೆ ಎಚ್ಚರ ವಹಿಸುವ ಹೊಣೆಗಾರಿಕೆ ಯುವ ಸಮೂಹದ ಮೇಲಿದೆ ಎಂದು ತಿಳಿಸಿದರು. ಸರ್ವರಿಗೂ ಸಮಾನ ಮತದಾನದ ಹಕ್ಕು ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಅಂಬೇಡ್ಕರ್ ಸಮಾಜದಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಜಾಗೃತಿ ಮೂಡಿಸಲು ಅಪಾರವಾಗಿ ಶ್ರಮಿಸಿದರೆಂದು ಅವರು ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಖ್ಯಾತ ಹರಿಕಥಾ ವಿದ್ವಾನ್ ಕಲಾಶ್ರೀ ಲಕ್ಷ್ಮಣದಾಸ್ ಅಂಬೇಡ್ಕರ್ ರವರ ಜೀವನ ವೃತ್ತಾಂತ ಕುರಿತ ಜನಕಥಾ ಕೀರ್ತನೆಯನ್ನು ಪ್ರಸ್ತುತಪಡಿಸಿದರು. ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಕೆ.ಆರ್. ಜಲಜಾ ಪ್ರಾಸ್ತಾವಿಕ ಭಾಷಣ ಮಾಡಿದರು. ವಿಶ್ವವಿದ್ಯಾನಿಲಯದ ಕುಲಸಚಿವರಾದ ನವೀನ್ ಜೋಸೆಫ್.ಎ., ಕುಲಸಚಿವರು (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ.ಎಸ್.ನಾಗರಾಜ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಕೃಷ್ಣಮೂರ್ತಿ.ಜಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ.ಗೋಪಿ. ಎಸ್.ಎಂ. ಕಾರ್ಯಕ್ರಮ ನಿರೂಪಿಸಿದರು. ವಾಣಿಶ್ರೀ ವಂದಿಸಿದರು.


ಸೆಂಟ್ರಲ್ ಕಾಲೇಜ್ ಗಡಿಯಾರ ಗೋಪುರದ ಅವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತಿ ಆಚರಣೆ

# ರಷ್ಯನ್ ಗಗನಯಾತ್ರಿ ಭೇಟಿ

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರ ರಷ್ಯನ್ ಹೌಸ್‌ನ ಸಹಯೋಗದಲ್ಲಿ “ರಷ್ಯನ್ ಗಗನಯಾತ್ರಿ ಜೊತೆ ಸಂವಾದ” ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಖ್ಯಾತ ರಷ್ಯನ್ ಗಗನಯಾತ್ರಿ ಡೆನಿಸ್ ಮ್ಯಾಟ್ವೀವ್ ವಿಶೇಷ ಅತಿಥಿಯಾಗಿ ಆಗಮಿಸಿದ್ದರು. ರಷ್ಯನ್ ಅಕಾಡೆಮಿ ಆಫ್ ಸೈನ್ಸಸ್‌ನ ಹೈಪೋಕ್ಸೆನೆಟಿಕ್ ಇಂಪ್ಯಾಕ್ಟ್ ಮುಖ್ಯಸ್ಥರಾದ ಅಲೆಕ್ಸೀ ಶ್ಪಾಕೋವ್ ಗೌರವ ಅತಿಥಿಯಾಗಿ ಉಪಸ್ಥಿತರಿದ್ದರು.

ಜಾಗತಿಕ ಭಾಷೆಗಳ ಕೇಂದ್ರದ ನಿರ್ದೇಶಕರಾದ ಡಾ. ಜ್ಯೋತಿ ವೆಂಕಟೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕುಲಪತಿಗಳಾದ ಪ್ರೊ.ರಮೇಶ್.ಬಿ. ಮಾತನಾಡಿ ಕುತೂಹಲವೇ ಮಾನವ ಪ್ರಗತಿಗೆ ಪ್ರಮುಖ ಚಾಲಕಶಕ್ತಿ ಎಂದು ವಿವರಿಸಿದರು. ಅಂತರಿಕ್ಷದಿಂದ ಕಾಣುವ ಗಡಿಗಳಿಲ್ಲದ ವಿಶ್ವದ ದೃಶ್ಯವನ್ನು ಉಲ್ಲೇಖಿಸಿ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಮಿತಿಗಳನ್ನು ಮೀರಿ ಚಿಂತಿಸುವಂತೆ ಅವರು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಕಾರ್ಯಕ್ರಮದ ಪ್ರಧಾನ ಆಕರ್ಷಣೆಯಾಗಿದ್ದ ಡೆನಿಸ್ ಮ್ಯಾಟ್ವೀವ್ ತಮ್ಮ ಅಂತರಿಕ್ಷಯಾನದ ಅನುಭವಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳು ಉತ್ಸಾಹದಿಂದ ಅನೇಕ ಪ್ರಶ್ನೆಗಳನ್ನು ಮುಂದಿಟ್ಟರು. ಮಾನವ ದೇಹದ ಮೇಲೆ ಜಿ–ಫೋರ್ಸ್ ಪರಿಣಾಮದಿಂದ ಹಿಡಿದು ಭೂಮಿಯ ಹೊರಗಿನ ಜೀವಿಗಳ ಸಾಧ್ಯತೆಗಳವರೆಗೆ ರಷ್ಯನ್ ಗಗನಯಾತ್ರಿ ಉತ್ತರಿಸಿದರು.

ಗೌರವ ಅತಿಥಿಯಾದ ಅಲೆಕ್ಸೀ ಶ್ಪಾಕೋವ್ ಪ್ರದರ್ಶಿಸಿದ ವಿಡಿಯೋ ಅಂತರಿಕ್ಷ ವಿಜ್ಞಾನ ಮತ್ತು ಖಗೋಳಶಾಸ್ತ್ರ ಕ್ಷೇತ್ರಗಳಲ್ಲಿನ ಕಠಿಣ ತರಬೇತಿ ಪ್ರಕ್ರಿಯೆಗಳು ಮತ್ತು ಹೊಸ ಆವಿಷ್ಕಾರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿತು.


ರಷ್ಯನ್ ಗಗನಯಾತ್ರಿ ಡೆನಿಸ್ ಮ್ಯಾಟ್ವೀವ್ ಗೌರವ ಅತಿಥಿ ಅಲೆಕ್ಸೀ ಶ್ಪಾಕೋವ್‌ಗೆ ಕುಲಪತಿಗಳಿಂದ ಅಭಿನಂದನೆ

# ಡಾ.ರಾಜ್ ಆತ್ಮಚರಿತ್ರೆ "ಕಥಾನಾಯಕನ ಕಥೆ" ಜನಾರ್ಪಣೆ

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಡಾ.ರಾಜ್‌ಕುಮಾರ್ ಅಧ್ಯಯನ ಪೀಠ ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪ್ರಸಾರಾಂಗದ ಸಹಯೋಗದಲ್ಲಿ ಸೆಂಟ್ರಲ್‌ಕಾಲೇಜ್ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಕನ್ನಡದ ಮೇರುನಟ ಡಾ. ರಾಜ್‌ಕುಮಾರ್‌ರವರ ಆತ್ಮಚರಿತ್ರೆ "ಕಥಾನಾಯಕನ ಕಥೆ" ಕೃತಿಯನ್ನು ವರನಟನ ಪುತ್ರರಾದ ಜನಪ್ರಿಯ ಚಿತ್ರನಟ ಡಾ. ಶಿವರಾಜ್‌ಕುಮಾರ್ ಏಪ್ರಿಲ್ 12ರಂದು ಜನಾರ್ಪಣೆಗೊಳಿಸಿದರು.

ಇದೇ ವೇಳೆ ನಟಸಾರ್ವಭೌಮನ 20ನೇ ಪುಣ್ಯ ಸ್ಮರಣೆಯ ಸಂದರ್ಭದಲ್ಲಿ ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ರಮೇಶ್.ಬಿ, ಡಾ.ರಾಜ್‌ಕುಮಾರ್ ಕಲಾ ಬದುಕಿನ ಛಾಯಾಚಿತ್ರ ಗ್ಯಾಲರಿಯ ಉದ್ಘಾಟನೆಯನ್ನು ವಿಧ್ಯುಕ್ತವಾಗಿ ನೆರವೇರಿಸಿದರು.

ಆಶಯ ಭಾಷಣ ಮಾಡಿದ ನಾಡೋಜ ಬಂಡಾಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪನವರು ಡಾ. ರಾಜ್‌ಕುಮಾರ್ ಅವರನ್ನು ಜನಜೀವನದ ನಾನಾ ಆಯಾಮಗಳನ್ನು ಬೆಳ್ಳಿತೆರೆಯ ಮೇಲೆ ಪ್ರತಿಬಿಂಬಿಸಿದ "ಪ್ರಜಾ ಪ್ರತಿಭೆ" ಎಂದು ಬಣ್ಣಿಸಿದರು.

ರಂಗಭೂಮಿ ಗರಡಿಯಲ್ಲಿ ಪಳಗಿ ರಜತ ಪರದೆ ಮೇಲೆ ರಾರಾಜಿಸಿ ನಾಡು ನುಡಿಯ ರಕ್ಷಣೆಗಾಗಿ ಹೋರಾಡಿದ ಸರ್ವಜನರ ಮನ್ನಣೆಗೆ ಪಾತ್ರರಾದ ಡಾ. ರಾಜ್‌ಕುಮಾರ್ ಕನ್ನಡ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿರುವ ಸಾಂಸ್ಕೃತಿಕ ನಾಯಕನೆಂದು ಅವರು ಬಣ್ಣಿಸಿದರು.

ಡಾ.ರಾಜ್ ರಂಗಪ್ರವೇಶದ ನಂತರವೇ ಗೋಕಾಕ್ ಚಳವಳಿ ಉತ್ತುಂಗ ಹಂತ ತಲುಪಿ ಯಶಸ್ವಿಯಾಯಿತೆಂದು ಪ್ರತಿಪಾದಿಸಿದ ಅವರು ತಮ್ಮ ಕಲಾಜೀವನವನ್ನು ಕನ್ನಡಕ್ಕೆ ಮುಡಿಪಾಗಿಟ್ಟಿದ್ದ ರಾಜ್‌ಕುಮಾರ್ ಜಾತ್ಯಾತೀತ ಬದುಕು ಸಾಗಿಸಿದ ಆದರ್ಶಪ್ರಾಯ ವ್ಯಕ್ತಿಯೆಂದು ವಿಶ್ಲೇಷಿಸಿದರು.



ಗಣ್ಯರಿಂದ ಡಾ.ರಾಜ್ ಆತ್ಮಚರಿತ್ರೆ "ಕಥಾನಾಯಕನ ಕಥೆ" ಪುಸ್ತಕ ಬಿಡುಗಡೆ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಖ್ಯಾತ ನಟಿ ಡಾ. ಜಯಮಾಲಾ ಅವರು ಮಾತನಾಡಿ ಡಾ. ರಾಜ್‌ಕುಮಾರ್ ಕನ್ನಡ ಕಲಾಲೋಕದ ಮಹಾಪ್ರವಾಹವೆಂದು ವರ್ಣಿಸಿದರು. 'ಕಥಾನಾಯಕನ ಕಥೆ' ಕೃತಿಯ ಕೆಲವು ಸ್ವಾರಸ್ಯಕರ ಪ್ರಸಂಗಗಳನ್ನು ಉಲ್ಲೇಖಿಸಿದ ಅವರು ಸರಳ ಸಜ್ಜನಿಕೆ ಗುಣಗಳ ವರನಟನ ಜೊತೆಗೆ ಅಭಿನಯಿಸಿದ ಅಪೂರ್ವ ಕ್ಷಣಗಳನ್ನು ಮೆಲುಕು ಹಾಕಿದರು. ಹಿರಿಯ ನಿರ್ದೇಶಕರಾದ ಭಾರ್ಗವ ರವರೂ ರಾಜ್ ಅವರೊಂದಿಗಿನ ಒಡನಾಟದ ನೆನಪಿನ ಬುತ್ತಿಯನ್ನು ಹಂಚಿಕೊಂಡರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಿ.ವಿ.ಪರಮಶಿವಮೂರ್ತಿ,ಡಾ. ರಾಜ್‌ಕುಮಾರ್ ಅಧ್ಯಯನ ಪೀಠಕ್ಕೆ ಬೆಂಗಳೂರಿನಲ್ಲಿ ಸೂಕ್ತ ನಿವೇಶನ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ನಾಡೋಜ ಡಾ.ರಾಜ್‌ಕುಮಾರ್ ಅಧ್ಯಯನ ಪೀಠದ ಸಂಚಾಲಕರಾದ ಡಾ.ಎ.ಎಸ್. ಪ್ರಭಾಕರ್ 'ವಿಜಯಚಿತ್ರ' ಮಾಸಿಕದಲ್ಲಿ ಪ್ರಕಟವಾದ ಆತ್ಮಕಥೆ ಸಂಚಿಕೆಗಳ ಸಂಗ್ರಹವಾದ ಈ ಅಪರೂಪದ ಕೃತಿಯನ್ನು ಇಂಗ್ಲೀಷ್ ಹಾಗೂ ಇತರೆ ಭಾರತೀಯ ಭಾಷೆಗಳಿಗೂ ಅನುವಾದಿಸಲಾಗುವುದೆಂದು ವಿವರಿಸಿದರು.

ಚಿತ್ರನಟರಾದ ಟಿ. ಗುರುದತ್ ವಿಶೇಷ ಆಹ್ವಾನಿತರಾಗಿದ್ದರು. ಉಭಯ ವಿಶ್ವವಿದ್ಯಾಲಯಗಳ ಪ್ರಸಾರಾಂಗದ ನಿರ್ದೇಶಕರಾದ ಡಾ.ಪಿ.ಮಹದೇವಯ್ಯ ಮತ್ತುಡಾ.ಟಿ.ಎನ್.ತಾಂಡವಗೌಡ ಹಾಗೂ ಹಂಪಿ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ವಿರೂಪಾಕ್ಷಿ ಪೂಜಾರಹಳ್ಳಿ, ಹಿರಿಯ ಚಿತ್ರನಟ ಸುಂದರರಾಜ್, ಚಿತ್ರ ನಿರ್ಮಾಪಕರಾದ ಚಿನ್ನೇಗೌಡರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಮಾರಂಭದ ವೇಳೆ ಅಗಲಿದ ಪ್ರಖ್ಯಾತ ಗಾಯಕಿ ಆಶಾಭೋಸ್ಲೆಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

# Workshop on Teaching Philosophy and Methods

A two-day workshop on 'Teaching philosophy , teaching methods and forms of learning in higher education' was organised by the Department of Social Work under the joint auspecies of Dr. MSBCU, Samvada, and Baduku on April 16, 2026.

The workshop was inaugurated by the Vice-Chancellor Prof. Ramesh B., who stressed the importance of integrating technology into classroom teaching. He said that classrooms should not remain limited to syllabus-based discussions but must connect learning to contemporary social issues, making teachers more relevant to students.

He observed that classrooms should empower students "to read the world and write the word," and recommended Paulo Freire's Pedagogy of the Oppressed as essential reading for young teachers entering the profession.

On the occasion, two books on education — ಕಲಿಕೆಯ ಕನ್ನಡಿ and ಶಿಕ್ಷಣ ಸಿಕ್ಕಿದ್ದಲ್ಲ ದಕ್ಕಿಸಿಕೊಂಡಿದ್ದು were released.

The inaugural session was attended by Dr. Krishnamurthy.G, Academic Council Member of the University , Prof. Ritika Sinha, Chairperson of the Department of Social Work, Savitha Suresh Babu, Programme Director of Samvada, Murali Mohan from Baduku and Dayananda, journalist from Prajavani.


VC Prof Ramesh B.releasing books on teaching and pedagogy

In his address, Sripada Bhat discussed various levels of the education system that shape society, including public policy, philosophy of education, social engineering, and pedagogy. He traced the history of higher education and highlighted the gradual decline in public funding, which he said is contributing to the privatisation of quality education. He also emphasised the crucial role of public universities.Themes such as democratic pedagogy inspired by Raymond Williams, intercultural pedagogy, and critical pedagogy were also explored.

Banjagere Jayaprakash enriched the discussion with examples from literature to underline the value of a multidisciplinary approach to teaching. He encouraged participants to engage with the works of scholars such as R.C.Dhere, Romila Thapar, D.R.Nagaraj, and Günther-Dietz Sontheimer.

Dr. Nitya Vasudevan, Prof. Azim Premji University highlighted gender-sensitive teaching methods in classrooms. Lakshmipathi focused on ethics and values in teaching. He said classrooms inevitably reflect the society in which they exist, and teachers must understand classroom diversity and design teaching methods rooted in constitutional values.

**-Dr. Malini M.**

# Sociology Faculty Meet

The Department of Studies and Research in Sociology organised Sociology Faculty Meet of various affiliated colleges of Dr.MSBCU on 06-04-2026.

Various issues related to UG and PG admission, Syllabus and challenges faced by the faculties were discussed. Members were opinined on measures to strengthen the Sociology as one of the most important and core subject. Prof. Nirmala.M, Chairperson of the department, suggested to have curriculum according to the needs of the job market.

On this occasion Dr.G. Krishnamurthy, Academic Council Member of the University, was felicitated by the Department and he promised to extend his support to strengthen the subject from all aspects.

**-Dr. Savitha B.C.**

## Lecture on "The Art of News Anchoring"

A Guest Lecture on "The Art of News Anchoring" was conducted on 17th April 2026 at University College for Women, Malleshwaram.

Akhilesh Dabbekatte., Anchor, Karnataka News Beat shared valuable insights into the field of Journalism. He explained various roles within a newsroom, including Bulletin Producer, Input Editor, Output Editor, and Panel Producer. He also discussed key technical aspects such as TRP, the use of a teleprompter, and the functioning of PCR (Production Control Room).

He also introduced different ways of reading news, including formal news reading, conversational style anchoring, and live reporting techniques. He also explained about breaking news, headlines, field reporting, and feature stories.

**-Gayatri Y,** Faculty

# Bharat Ratna Dr B. R. Ambedkar and the French Connection

Dr B.R. Ambedkar (1891–1956), fondly known as Babasaheb, was an Indian jurist, economist, and social reformer who played a dominant role in drafting the Indian Constitution as its chief architect.

A strong advocate for social justice, he fought against caste discrimination and worked for the rights of marginalized communities, drawing inspiration from democratic ideals and the teachings of Gautama Buddha. During his early academic years (1913–1916) at Columbia University in NewYork.

Dr B. R. Ambedkar enrolled in 1913 and, by around 1915, began studying French to support his research. He learned French under Prof. P. de Bacourt in the Department of Roman Languages, primarily to access European scholarly works in their original languages. This linguistic training proved crucial in his development as a scholar during the 1910s and 1920s, enabling him to read and cite influential works such as those of Eugène Burnouf, a French Indologist's L' Introduction à l' Histoire du Buddhisme Indien, which enriched his understanding of Buddhism.

He was a distinguished polyglot, proficient in at least 9 to 11 languages. His repertoire of Languages comprised of a mix of Indian and foreign languages which included Marathi (mother tongue), Hindi, Gujarati, Sanskrit, Pali, and Prakrit , English, French, German, Persian, and Urdu.

In the following decades (1920s–1940s), he engaged deeply with the ideals of the French Revolution—Liberty, Equality, and Fraternity—while emphasizing that these principles were not borrowed from France. In a later explanation, he asserted that his philosophical foundation was rooted in the teachings of Gautama Buddha rather than in the Revolution.

In the Indian context, he identified the caste system as the greatest barrier to fraternity and


Dr. B.R. Ambedkar

proposed the Buddhist concept of Maitree (loving-kindness), derived from the teachings of Gautama Buddha, as the true moral foundation for a democratic society. In a 1954 All India Radio address, Dr B.R. Ambedkar explicitly clarified that his philosophy was not derived from the French Revolution but was rooted in Buddhist thought.

His engagement with French intellectual traditions also included research visit to Paris, where he consulted major libraries and studied the works of French Indologists, maintaining a scholarly rather than collaborative relationship with them.

On Constitution Day in 2025, a permanent bronze bust of B. R. Ambedkar was installed at the headquarters of UNESCO in Paris. Placed within the UNESCO Garden of Peace, it serves as an international homage to his pivotal role in shaping the Indian Constitution.

On the occasion of Ambedkar Jayanti (14th April, 2026), a delegation of three French senators from the France–India Inter parliamentary Friendship Group, led by Mireille Jouve, paid tribute and honoured the "Father of the Indian Constitution" through a wreath-laying ceremony.

**- Dr. S Krishnan,**
CGL.Dr MSBCU

# Seminar in Physics Dept.

A seminar on the topic "Research Strategy, Methodology and Innovation" was organized by the Department of Physics, Dr.MSBCU, on 17th April 2026 at Raman Hall. The resource person for the seminar was Prof. P.Sampathkumaran, former Joint Director, MTD, CPRI, Ministry of Power, Government of India, Bengaluru.

The seminar began with a formal welcome, followed by an insightful session where Prof. P. Sampathkumaran elaborated on effective research strategies, systematic methodologies, and the importance of innovation in scientific progress. Being an alumnus of the department from the 1970–72 batch, he fondly shared his academic experiences and memories with the students, inspiring and encouraging them to actively pursue research. He also guided students on developing research-oriented thinking and problem-solving skills. The event was presided over by Chairperson Prof. Medha Itagi Huilgol, in the presence of faculty members Jayashri Kori, Dr. Ashokkumar, Ms. Shalini T.K, Mr. Ujwal C, and Mr. Shashikumar S.K, along with M.Sc Physics students. The seminar concluded with an interactive session, where students actively engaged with the speaker and clarified their doubts.


Faculty of Dept. of Physics felicitating Prof. P. Sampathkumaran

# National Conference on Inclusive Disability Interventions

The Department of Studies & Research in Social Work, Dr. Manmohan Singh Bengaluru City University, in collaboration with The Association of People with Disability (APD), successfully organized a two-day National Conference on "Inclusive Disability Interventions" on April 9 and 10, 2026, at the Jnanajyothi Auditorium, Central College Campus, Bengaluru.

The conference was inaugurated by Uma Mahadevan,I.A.S., Additional Chief Secretary and Development Commissioner, Government of Karnataka. In her inaugural address, she emphasized the importance of strengthening disability-inclusive policies and encouraged the organizers to submit a White Paper along with key recommendations emerging from the conference for policy consideration and future action. Delivering the keynote address, Dr G.K.Mahantesh, Founder-Chairman of Samarthanam International Trust, urged both the government and society to extend greater support for the empowerment of differently abled people, noting that a majority of them in the country continue to live below the poverty line.

He expressed concern over the low representation of differently abled people in higher education and highlighted the barriers that continue to deny them equal employment opportunities. Stressing the need for self-reliance, he hoped for the creation of an enabling environment where differently abled people can lead independent and dignified lives instead of depending solely on pensions. Dr. Mahantesh also emphasized the need to eliminate all forms of discrimination and to develop an inclusive mindset that ensures equal opportunities for all, thereby integrating differently abled people into the mainstream of social and economic progress.



Release of Journal comprising of selected research papers by the dignitaries at the conference

The conference was graced by distinguished guests including Dr.N.S. Senthil Kumar, CEO of Association of People with Disability; Prof. I.A. Sharief, retired Professor of NIMHANS; and Prof. Y.S. Siddegowda, former Vice-Chancellor of Tumkur University.

Hon'ble Vice-Chancellor Prof. Ramesh B. presided over the conference and assured that the university would introduce skill-based and technology-oriented curricula beneficial to students with disabilities. He also congratulated the organizing secretaries and the entire Department of Social Work for successfully conducting the national conference. Registrar Naveen Joseph A., Registrar (Evaluation) Prof. Ramesh B. Kudenatti, Chairperson of the Department of Social Work Prof. Ritika Sinha, Organizing Secretaries Ms. Vanishree M., Dr. Rajashekar C., Dr. Sathish Kumar R., along with other co-organizing secretaries, were present during the event. Over the course of the two-day conference, nearly 150 research papers were presented.

The academic deliberations included three plenary sessions and six technical sessions focusing on various dimensions of disability inclusion, rehabilitation, policy, education, and social empowerment.

The valedictory session was attended by Dr. Ashok, Commissioner, Department of Differently Abled and Senior Citizens, who congratulated the organizers for successfully conducting the conference and appreciated the efforts taken toward promoting inclusive development.

The conference witnessed an overwhelming participation of nearly 1,200 delegates from across the country and abroad. Among them, around 300 participants were differently abled people, and nearly 30 were foreign delegates. Faculty members, researchers, social workers, rehabilitation professionals, students, and representatives from voluntary organizations actively participated in the conference discussions and deliberations. An exhibition showcasing disability-inclusive initiatives and assistive resources was also organized as part of the conference.

**- Vanishree M,** MSW Dept.


**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

**ಸೌಂದರ್ಯ ಆರ್**,ಎಂಸಿಜೆ, ದ್ವಿತೀಯ
**ಎ.ಪಿ. ಶರ್ಮಾ**,ಎಂಸಿಜೆ, ಪ್ರಥಮ
**ಶ್ರೀಜಿತ್**,ಎಂಸಿಜೆ, ಪ್ರಥಮ


**ತಿಂಗಳ ಬುತ್ತಿ**

**04/05/2026 - 05/05/2026:** "InnoveX 2.0" Intercollegiate Techfest

**07/05/2026:** Chemostava -Banner launch.


Visit University's website **www.bcu.ac.in** for regular updates of Univerisity activities and also read ANIKETANA. Send Reports/Photos to **E-mail id : aniketana@bcu.ac.in**


# Colour Polymorphism – 225 Years of Shieldtail Snake Biology

We are often scared when we hear or see a snake.

Unfortunately, we are unaware that more than 75% of snakes are not venomous, and less than 7% of them may kill or seriously injure people.

Snakes are vital ecological agents that keep ecosystems balanced by acting as predators and prey, providing free natural pest control, and assisting with disease prevention. They limit rodent populations, which reduces crop damage and the spread of zoonotic diseases like as Lyme disease to humans and livestock.

Shieldtails are little (< 600 mm) non-venomous snakes that live underground. They are part of the Uropeltidae family of snakes, sometimes known as uropeltids. Shieldtails are named by the shape of their tail ends, which resemble a disc-shaped shield. Shieldtails are currently found in 73 different species across India and Sri Lanka. Rhinophis is the second most diverse genus of shieldtails, with 27 species and the only one found in India and Sri Lanka. Although Sri Lanka has the greatest diversity of Rhinophis (20 species), India today contains seven. Shieldtail snakes' ecology is still poorly known. There is little known about what they do underground, how they reproduce, when they emerge above ground, and their overall behavior, making it difficult to assess threat levels and conservation status.



Figure 1 Figure 2 Figure 3

Dr. Venu G, an International Union for Conservation of Nature (IUCN) recognized caecilian expert and currently serving as a faculty, department of Zoology, Dr. Manmohan Singh Bengaluru City University, in collaboration with researchers from Karnataka State Open University, Mysuru, Indian Institute of Science, Bengaluru, Central Coffee Research Institute, Chikmagalur, Chandigarh University, Mohali, Kalinga Foundation, Agumbe, and Bangalore University, Bengaluru, observed a remarkable intraspecific variation in the dorsal pattern (dorsal color polymorphism) in young and adults, as well as males and females of Rhinophis sanguineus during their herpetofaunal expeditions in the Western Ghats (Fig. 1). They discovered a male Rhinophis sanguineus with undivided subcaudals, which is an unusual occurrence among shieldtails (Fig. 2). Also, they identified a new population of R. karinthandani in Bhagamandala, on the Kodagu Plateau, almost 70 kilometers north of the previously known range in the Wayanad plateau, the first record for the state of Karnataka (Fig. 3). Their findings were published in Zootaxa, a prestigious international magazine published by Magnolia Press in New Zealand (http://doi.org/10.11646/zootaxa.5777.2.5).

# UCW 3rd Annual Sports Meet

The department of Physical Education, UCW celebrated 3rd Annual Sports Meet on 24th April, 2026 at Chandrashekar Azaad Ground, Malleshwaram, Bangalore.

Principal of the college, Prof. Jyothi Venkatesh flagged off the sports meet. Students actively participated with great enthusiasm in various sports events including Track events are 100M, 200M, 400M and 4x100M Relay. Field events like, Long jump and shot Put. Team events like, Throw ball, Tug of War, Kabaddi and Kho-Kho witnessed energetic participation. Indoor games like, Chess Carrom (singles & doubles) were also organized.

The sports meet witnessed vibrant performance, competitive spirit and remarkable achievements of our students. Faculty members Deepthi K .H. and Praveen Kumar coordinated the programme.




UCW Students participating in the sports meet